**ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ**

**ವಿಷಯ :** ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿರುವ ರಸ್ತೆಗಳ ಕಾಮಗಾರಿಗಳ ಅನುಷ್ಠಾನಕ್ಕಾಗಿ 2007–08ನೇ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ :**

1. ಸರ್ಕಾರದ ಆದೇಶ ಸಂಖ್ಯೆ: ಸಿಐ 164 ಎಸ್‌ಜಿಎಫ್ 07 ದಿನಾಂಕ: 20.06.07.
2. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ರವರು ಪತ್ರ ಸಂಖ್ಯೆ: ಡಿಎಸ್‌ಕೆ/ರಕರ/ಅನುದಾನ 1/2006–07 ದಿನಾಂಕ:29.05.07 ಮತ್ತು ಡಿಎಸ್‌ಕೆ/ರಕರ/ ಶಿವಮೊಗ್ಗ/01/ 2003–04 ದಿನಾಂಕ: 18.07.07.

**ಪ್ರಸ್ತಾವನೆ :–**

ರಾಜ್ಯದ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆಗಳಿಗೆ 1998–99 ರಿಂದ 2003–04ರ ಸಾಲಿನಲ್ಲಿ ಮಂಜೂರಾತಿ ನೀಡಲಾದ ಕಾಮಗಾರಿಗಳಿಗೆ ಒಟ್ಟು ರೂ.933.62 ಲಕ್ಷ ಬಿಡುಗಡೆ ಮಾಡಬೇಕಾಗಿದೆ ಎಂದು ಮೇಲೆ ಓದಲಾದ (2)ರಲ್ಲಿರುವ ದಿನಾಂಕ: 29.05.07ರ ಪತ್ರದಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ರವರು ತಿಳಿಸುತ್ತಾ 2007–08ನೇ ಸಾಲಿಗೆ ಈ ಉದ್ದೇಶಕ್ಕಾಗಿ ಒದಗಿಸಲಾಗಿರುವ 160 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲು ಸಹ ಮೇಲೆ ಓದಲಾದ (2) ರಲ್ಲಿರುವ ದಿನಾಂಕ: 29.05.07ರ ಪತ್ರದಲ್ಲಿ ಕೋರಿದ್ದಾರೆ.

ರಾಜ್ಯದ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕಾಗಿ 2007–08ನೇ ಸಾಲಿನಲ್ಲಿ ಒದಗಿಸಲಾಗಿರುವ 160/– ಲಕ್ಷ ರೂ.ಗಳಲ್ಲಿ 53 ಲಕ್ಷ ರೂಳನ್ನು ಮೇಲೆ ಓದಲಾದ (1)ರಲ್ಲಿರುವ ದಿನಾಂಕ: 20.06.07ರ ಆದೇಶದಲ್ಲಿ ಬಿಡುಗಡೆ ಮಾಡಿದೆ.

ಮೇಲೆ ಓದಲಾದ (2)ರಲ್ಲಿರುವ ದಿನಾಂಕ: 18.07.07ರ ಪತ್ರದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗಾಗಿ 2007–08ನೇ ಸಾಲಿನಲ್ಲಿ ಒದಗಿಸಲಾದ 160 ಲಕ್ಷ ರೂಗಳ ಅನುದಾನದಲ್ಲಿ ಬಾಕಿ ಉಳಿದ 107 ಲಕ್ಷ ರೂಗಳನ್ನು ಈ ಕೆಳಕಂಡ ಕಾರ್ಖಾನೆಗಳ ವ್ಯಾಪ್ತಿಯಲ್ಲಿನ ಅಭಿವೃದ್ಧಿ ಕಾಮಗಾರಿಗಳಿಗೆ ಮರು ಹಂಚಿಕೆ ಮಾಡಿ ಬಿಡುಗಡೆ ಮಾಡಲು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕೋರಿದ್ದಾರೆ.

| ಕ್ರ ಸಂ. | ಕಾರ್ಖಾನೆ ಹೆಸರು | ವರ್ಷ | 09.04.07 ರ ಪತ್ರದಲ್ಲಿ ಹಂಚಿಕೆಗೆ ಕೋರ ಲಾದ ಮೊತ್ತ | ಈಗಾಗಲೇ ಬಿಡುಗಡೆ ಮಾಡಿರುವ ಮೊತ್ತ | ಉಳಿಕೆ ಮೊತ್ತ | ಮರು ಹಂಚಿಕೆ ಕೋರಿ ರುವ ಮೊತ್ತ |
|---|---|---|---|---|---|---|
| 1. | ಗೋದಾವರಿ ಶುಗರ್ಸ್ (ಲಿ) ಸಮೀರ ವಾಡಿ | 1998–1999 | 12.00 | 4.00 | 8.00 | 8.00 |
| 2. | ಗೋದಾವರಿ ಶುಗರ್ಸ್ (ಲಿ), ಸಮೀರವಾಡಿ | 1999–2000 | 48.46 | 6.88 | 41.58 | 8.89 |
| 3. | ಐ.ಎಸ್. ಆರ್. ಶುಗರ್ಸ್, ಹೊಸಪೇಟೆ | 2000–2001 | 14.18 | – | 14.18 | – |
| 4. | ಶ್ಯಾಮನೂರು ಶುಗರ್ಸ್ (ಲಿ) ದುಗ್ಗಾವತಿ | 2000–2001 | 21.28 | – | 21.28 | – |
| 5. | ಗೋದಾವತಿ ಶುಗರ್ಸ್ (ಲಿ), ಸಮೀರವಾಡಿ | 2001–2002 | 10.20 | – | 10.20 | 10.20 |
| 6. | ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆ (ನಿ), ಶ್ರೀನಿವಾಸಪುರ | 2002–2003 | 12.45 | 4.20 | 8.25 | 8.25 |
| 7. | ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆ (ನಿ), ಶ್ರೀನಿವಾಸಪುರ | 2003–2004 | 8.17 | 2.70 | 5.47 | 5.47 |
| 8. | ಕರ್ನಾಟಕ ಸಹಕಾರ ಸಕ್ಕರೆ ಕಾರ್ಖಾನೆ (ನಿ), ಹಾವೇರಿ | 1998–1999 | 23.70 | – | 23.70 | 23.70 |
| 9. | ಕರ್ನಾಟಕ ಸಹಕರ ಸಕ್ಕರೆ ಕಾರ್ಖಾನೆ (ನಿ), ಹಾವೇರಿ | 2002–2003 | 5.01 | 1.70 | 3.31 | 3.31 |

| | | | | | | |
|---|---|---|---|---|---|---|
| 10. | ಕರ್ನಾಟಕ ಸಹಕಾರ ಸಕ್ಕರೆ ಕಾರ್ಖಾನೆ (ನಿ), ಹಾವೇರಿ | 2003–2004 | 2.68 | 1.00 | 1.68 | 1.68 |
| 11. | ದಾವಣಗೆರೆ ಶುಗರ್ಸ್ (ಲಿ) | 2000–2001 | – | 32.52 | – | – |
| 12. | ಎಂ.ಪಿ.ಎಂ ಶುಗರ್ಸ್ (ಲಿ), ಭದ್ರಾವತಿ | 2001–2002 | – | – | 37.50 | 37.50 |
| | ಒಟ್ಟು | | **158.13** | **53.00** | | **107.00** |

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ರವರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಐ 164 ಎಸ್‌ಜಿಎಫ್ 07 (2), ಬೆಂಗಳೂರು ದಿನಾಂಕ: 25.01.2008.**

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಪ್ರಸ್ತಾವನೆಯಲ್ಲಿ ಕೋರಿದಂತೆ, ರಾಜ್ಯದಲ್ಲಿನ ಈ ಕೆಳಕಂಡ 9 ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಬರುವ ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ಕ್ರಿಯಾಯೋಜನೆಯನ್ನು ಕಾರ್ಯಗತಗೊಳಿಸಲು 2007–08ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ "4860–04–800–0–01 (ಯೋಜನೆ) 172" ರಡಿ ಒದಗಿಸಿರುವ ರೂ. 160 ಲಕ್ಷಗಳಲ್ಲಿ ಬಾಕಿ ಉಳಿದಿರುವ ರೂ.107 ಲಕ್ಷ ರೂ.ಗಳನ್ನು (ಒಂದುನೂರ ಏಳು ಲಕ್ಷ ರೂ.ಗಳು ಮಾತ್ರ) ಈ ಕೆಳಕಂಡ ಕಾರ್ಖಾನೆಗಳ ವ್ಯಾಪ್ತಿಯ ರಸ್ತೆ ಕಾಮಗಾರಿಗಳಿಗೆ ಆದ್ಯತೆ ಮೇರೆಗೆ ಬಿಡುಗಡೆ ಮಾಡುವ ಸಲುವಾಗಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ಬಿಡುಗಡೆ ಮಾಡಲಾಗಿದೆ.

| ಕ್ರ ಸಂ. | ಕಾರ್ಖಾನೆ ಹೆಸರು | ಸಂಗ್ರಹಿಸಲಾದ ವರ್ಷ | ಬಿಡುಗಡೆ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಗೋದಾವರಿ ಶುಗರ್ಸ್ (ಲಿ), ಸಮೀರವಾಡಿ | 1998–1999 | 8.00 |
| 2 | ಗೋದಾವರಿ ಶುಗರ್ಸ್ (ಲಿ), ಸಮೀರವಾಡಿ | 1999–2000 | 8.89 |
| 3 | ಗೋದಾವರಿ ಶುಗರ್ಸ್ (ಲಿ), ಸಮೀರವಾಡಿ | 2001–2002 | 10.20 |
| 4 | ಹೇಮಾವತಿ ಸ.ಸ.ಕಾ (ನಿ), ಶ್ರೀನಿವಾಸಪುರ | 2002–2003 | 8.25 |
| 5 | ಹೇಮಾವತಿ ಸ.ಸ.ಕಾ (ನಿ), ಶ್ರೀನಿವಾಸಪುರ | 2003–2004 | 5.47 |
| 6 | ಕರ್ನಾಟಕ ಸ.ಸ.ಕಾ (ನಿ), ಹಾವೇರಿ | 1998–1999 | 23.70 |
| 7 | ಕರ್ನಾಟಕ ಸ.ಸ.ಕಾ (ನಿ), ಹಾವೇರಿ | 2002–2003 | 3.31 |
| 8 | ಕರ್ನಾಟಕ ಸ.ಸ.ಕಾ (ನಿ), ಹಾವೇರಿ | 2003–2004 | 1.68 |
| 9 | ಎಂ.ಪಿ.ಎಂ ಶುಗರ್ಸ್ (ಲಿ), ಭದ್ರಾವತಿ | 2001–2002 | 37.50 |
| | ಒಟ್ಟು | | 107.00 |

ಈ ಆದೇಶವನ್ನು FD/1631/EXP-1-07 ದಿನಾಂಕ: 18.01.08ರ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಭಾರತದ ರಾಷ್ಟ್ರಪತಿಯವರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**ಪಿ.ಆನಂದ್ ಕುಮಾರ್**
ಪೀಠಾಧಿಕಾರಿ (ಸಕ್ಕರೆ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.